## ಯುವಜನರಿಗೆ ಲಸಿಕೆ

ಕ್ಷಯ ಮುಕ್ತಗೊಳಿಸಲು ಯುವಜನರಿಗೆ ಲಸಿಕೆಯನ್ನು ಅಭಿವೃದ್ಧಿ ಪಡಿಸಲಾಗಿದೆ ಎಂದು ಲಂಡನ್ ಸಂಶೋಧಕರ ಅಧ್ಯಯನವೊಂದು ಹೇಳಿದೆ.

ಬಡ ಹಾಗೂ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಕ್ಷಯ ಇನ್ನೂ ಕಾಡುತ್ತಿದೆ. ಅದನ್ನು ಪರಿಣಾಮಕಾರಿಯಾಗಿ ತೊಡೆದುಹಾಕಲು ಅನುಕೂಲವಾಗುವಂತೆ ಲಸಿಕೆಯನ್ನು ಅಭಿವೃದ್ಧಿಪಡಿಸಿದ್ದು ಅದನ್ನು ಯುವಜನರಿಗೆ ನೀಡುವುದರಿಂದ ಮುಂದೆ ಸಂಪೂರ್ಣವಾಗಿ ಕ್ಷಯ ಮುಕ್ತ ಸಮಾಜವನ್ನು ನಿರ್ಮಿಸಲು ಸಾಧ್ಯ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಇದು ಸಾರ್ವಜನಿಕ ಬಳಕೆಗೆ ಸಿಗಬೇಕು ಎಂದರೆ ಇನ್ನೂ ಹತ್ತು ವರ್ಷ ಕಾಯಬೇಕಾಗುತ್ತದೆ ಎಂದೂ ಅವರು ಹೇಳಿದ್ದಾರೆ.

## ಕೋಳಿ ಮಾಂಸದಿಂದ ಲಿವರ್ ಭದ್ರ!

ಬಿಳಿ ಮಾಂಸ ಹಾಗೂ ಮೀನನ್ನು ತಿನ್ನುವುದರಿಂದ ಮಾಂಸಾಹಾರಿಗಳು ಯಕೃತ್ (ಲಿವರ್) ಕ್ಯಾನ್ಸರ್ ಬರುವ ಸಾಧ್ಯತೆಯನ್ನು ಕಡಿಮೆ ಮಾಡಿಕೊಳ್ಳಬಹುದು ಎಂದು ವಿಜ್ಞಾನಿಗಳು ಹೇಳಿದ್ದಾರೆ.

ಹಾಗೆಂದ ಮಾತ್ರಕ್ಕೆ 'ರೆಡ್ ಮೀಟ್' ಅಥವಾ 'ಪ್ರೊಸೆಸ್ಡ್ ಮೀಟ್' ಬಳಕೆಯಿಂದ ಯಕೃತ್ ಕ್ಯಾನ್ಸರ್ ಬರುತ್ತದೆ ಎಂದೇನೂ ಇಲ್ಲ. ಆದರೆ ಕೋಳಿ ಮಾಂಸ ಹಾಗೂ ಮೀನನ್ನು ಸೇವಿಸುವುದರಿಂದ ಅಂತಹ ಸಾಧ್ಯತೆಯನ್ನು ಕಡಿಮೆ ಮಾಡಿಕೊಳ್ಳಬಹುದು ಎಂದು ವಿಜ್ಞಾನಿಗಳು ಸ್ಪಷ್ಟನೆಯನ್ನೂ ನೀಡಿದ್ದಾರೆ.

## ಅನುಭವ ಹಂಚಿ ಬೆಳೆಯಿರಿ

ಒಳ್ಳೆಯ ಅನುಭವವನ್ನು ಮತ್ತೊಬ್ಬರ ಜೊತೆ ಹಂಚಿಕೊಳ್ಳುವುದರಿಂದ ಅದು ವೈಯಕ್ತಿಕ ಬೆಳವಣಿಗೆಗೆ ಸಹಾಯಮಾಡುತ್ತದೆ ಎಂಬ ಕುತೂಹಲದ ವಿಷಯವನ್ನು ನ್ಯೂಯಾರ್ಕ್‌ನ ಸಂಶೋಧಕರು ಕಂಡು ಹಿಡಿದಿದ್ದಾರೆ.

ಯಾರು ಕನಸಿನ ಗುರಿ ಮುಟ್ಟಲು ಶ್ರಮಿಸುತ್ತಾರೋ ಅವರು, ತಮ್ಮ ಗುರಿ ಸಾಧನೆಯ ಮಾರ್ಗದಲ್ಲಿ ಆದ ಕಷ್ಟ –ನಷ್ಟಗಳನ್ನು ಇತರರ ಜೊತೆ ಹಂಚಿಕೊಂಡರೆ, ಅದು ಅವರ ಮುಂದಿನ ಬೆಳವಣಿಗೆಗೆ ನೆರವಾಗುತ್ತದೆ ಎನ್ನುವುದು ಸಂಶೋಧಕರ ವಾದ.

ತನ್ನ ಬಗ್ಗೆ ಹೇಳಿಕೊಳ್ಳುವುದು ಹಿತಾನುಭವ ನೀಡುತ್ತದೆ. ಇದು ವ್ಯಕ್ತಿಯ ಚಿತ್ತದ ಮೇಲೂ ಪ್ರಭಾವ ಬೀರುವುದರಿಂದ ಮುಂದಿನ ಸಾಧನೆಗೆ ನೆರವಾಗುತ್ತದೆ. ಅನುಭವವನ್ನು ಹಂಚಿಕೊಳ್ಳದೆ ಹೋದರೆ ಅದರಿಂದ ಆಗುವ ಸಹಾಯ ತಪ್ಪುತ್ತದೆ ಎಂದು ಮನೋತಜ್ಞರು ಅಭಿಪ್ರಾಯಪಟ್ಟಿದ್ದಾರೆ.

## ಚಿಕಿತ್ಸೆಯೇ ಪರಿಹಾರವಲ್ಲ

ಟೆಸ್ಟೊಸ್ಟೆರೊನ್ (testosterone) ಹಾರ್ಮೋನ್ ಪುರುಷರಲ್ಲಿ ಲೈಂಗಿಕ ಸಾಮರ್ಥ್ಯವನ್ನು ವೃದ್ಧಿಸುತ್ತದೆ. ಇದು ವೀರ್ಯ ಉತ್ಪಾದನೆಯಲ್ಲಿಯೂ ಪ್ರಧಾನ ಪಾತ್ರ ವಹಿಸುತ್ತದೆ. ಇದಕ್ಕೆ ಅನಗತ್ಯವಾಗಿ ಚಿಕಿತ್ಸೆ ಮಾಡಿಸುವುದು ಕ್ಷೇಮವಲ್ಲ. ಇದರಿಂದ ಜನನೇಂದ್ರಿಯ ಕ್ಯಾನ್ಸರ್ ಬರುವ ಸಾಧ್ಯತೆ ಹೆಚ್ಚುತ್ತದೆ ಎಂಬ ವಿಷಯವನ್ನು ವಾಷಿಂಗ್ಟನ್ ಸಂಶೋಧಕರು ಕಂಡುಹಿಡಿದಿದ್ದಾರೆ.

–ಟಿಪ್ಸ್

## ಸಮುದ್ರ ಮಥನ




### ಸಂಗ್ರಹಯೋಗ್ಯ ಲೇಖನ

ಸುಮಂಗಲಾ ಮುಮ್ಮಿಗಟ್ಟಿಯವರ 'ಕೆಂಪು ಗ್ರಹದ ಹೊಸ್ತಿಲಲ್ಲಿ' (ಸುಧಾ, ಅ. 9) ಮುಖಪುಟ ಲೇಖನ ಸಂಗ್ರಹಯೋಗ್ಯ. ಮಂಗಳಯಾನದ ವಿವರ, ಅದರ ಸಾಧಕ ಬಾಧಕಗಳು, ಉದ್ದೇಶ, ನಮಗಾಗುವ ಲಾಭ ಇವುಗಳನ್ನು ಲೇಖನ ಮನನ ಮಾಡಿ ಕೊಟ್ಟಿದೆ. ಅಂತರಿಕ್ಷ ಲೋಕದಲ್ಲಿ ಭಾರತ ವಿಶ್ವದ ಕೆಲವೇ ರಾಷ್ಟ್ರಗಳ ಮಟ್ಟಕ್ಕೇರಿರುವುದು ನಮಗೆಲ್ಲರಿಗೂ ಹೆಮ್ಮೆಯ ವಿಷಯ. ಕ್ರಿಕೆಟ್ ಗೆದ್ದಾಗ ಪಟಾಕಿ ಸಿಡಿಸಿ, ಸಂಭ್ರಮಿಸುವ ನಾವು ಈ ಸಂಭ್ರಮ ವನ್ನು ಆಚರಿಸಲೇ ಇಲ್ಲ. ನೂರು ಕ್ರಿಕೆಟ್ ಪ್ರಶಸ್ತಿ ಗೆದ್ದ ಸಂಭ್ರಮಗಳಿಗಿಂತಲೂ ನಮ್ಮ ಮಂಗಳಯಾನದ ಯಶಸ್ಸು ಹೆಚ್ಚಿನದ್ದು.

–ಹೇಮಲತಾ ಸುಬ್ರಹ್ಮಣ್ಯ, ಹಾಲ್ಮುತ್ತೂರು, ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ, ಬಿ.ಎಂ. ಸೊಲ್ಲಾಪುರೆ, ಬೀದರ್, ಮುಕುಂದ ಹೆರಕಲ್ಲ, ಗುಲ್ಬರ್ಗ, ಎಂ.ಜಿ. ರಾಮಚಂದ್ರ, ಮಂಡಗಳಲೆ, ಶೋಭಾ ವಿ. ತಿಳಿದೆ, ದಾವಣಗೆರೆ, ಡಾ. ಕೆ.ಕೆ. ಜಯಚಂದ್ರ ಗುಪ್ತ, ಹಾಸನ

### ಪಿಎಸ್‌ಎಲ್‌ವಿ

ಕೆಂಪು ಗ್ರಹದ ಹೊಸ್ತಿಲಲ್ಲಿ ಲೇಖನ ಅನೇಕ ಕೌತುಕದ ಅಂಶಗಳನ್ನೊಳ ಗೊಂಡಿದ್ದು, ಮಾಹಿತಿ ಪೂರ್ಣವಾಗಿತ್ತು. ಉಡಾವಣಾ ವಾಹನ PSLV (Polar Satellite Launch Vehicle) ಎಂಬುದು ತಪ್ಪಾಗಿ PSLU ಎಂದು ಮುದ್ರಿತವಾಗಿದೆ.

–ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ, ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

### ಸಮಂಜಸ ಲೇಖನ

ಬಿ.ಎಂ. ಹನೀಫ್‌ರವರ 'ಹಬ್ಬದ ಸಂಭ್ರಮ ಎಲ್ಲಿದೆ?' (ನಿಮ್ಮೊಡನೆ) ಲೇಖನ ಸಮಂಜಸವಾಗಿತ್ತು.

–ಪುಟ್ಟಗೌರಿ ಚಿದಾನಂದ ಕಳಸಮ್ಮ, ಗುಲಬರ್ಗ, ಕೆ.ಎಂ. ವೀರೇಶ್, ಕೂಡ್ಲಿಗಿ

### ಮನಸ್ಸು ಮುದಗೊಂಡಿತು

ಪ್ರವಾಸ ಲೇಖನ (ಆರ್. ವಿಶ್ವನಾಥ್) ಖಾಸ್ ಪಠಾರ್ ಸಹ್ಯಾದ್ರಿ ಹೂ ಕಣಿವೆ. ಏಳು ತರದ ಹೂವುಗಳನ್ನು ನೋಡಿ ಮನಸ್ಸು ಮುದಗೊಂಡಿತು. ಎಷ್ಟೊಂದು ಸೌಂದರ್ಯ ಸೊಗಸು ಮೂಡಿಬಂದಿದೆ.

–ಬಿ.ಎಸ್. ಮುಳ್ಳೂರ್, ಹಲಗತ್ತಿ, ಶೀಲಾ ಸತ್ಯೇಂದ್ರಸ್ವಾಮಿ, ಹರವೆಮಠ

### ಮನೋಜ್ಞ ಲೇಖನ

ಹಂಝ ಮಲಾರ್ ಅವರ 'ನಿನ್ನಿಪಾದೆಯಿದ ಪ್ರತಿಧ್ವನಿ ಕೇಳಿಸುತ್ತಿಲ್ಲ!' ಚಿತ್ರ ಲೇಖನ ಮನೋಜ್ಞವಾಗಿತ್ತು. ಪ್ರಕೃತಿಯ ಇಂಥ ವಿಸ್ಮಯ ಸ್ಥಳಗಳನ್ನು ಅಭಿವೃದ್ಧಿಪಡಿಸುವಲ್ಲಿ ಸರ್ಕಾರ ಕಾರ್ಯೋನ್ಮುಖವಾಗಲಿ.

–ವಿ. ಹಮೀದ್, ವಿಟ್ಲ

### 'ಮ್ಯಾಂಡೊಲಿನ್ ಮಾಂತ್ರಿಕ'

ಮೈಸೂರು ವಿ. ಸುಬ್ರಹ್ಮಣ್ಯ ಅವರ ಲೇಖನ ಚೆನ್ನಾಗಿತ್ತು. ಶ್ರೀನಿವಾಸ್ ಎಂದರೆ ಮ್ಯಾಂಡೊಲಿನ್; ಮ್ಯಾಂಡೊಲಿನ್ ಎಂದರೆ ಶ್ರೀನಿವಾಸ್ ಎನ್ನುವಷ್ಟರ ಮಟ್ಟಿಗೆ ಸಂಗೀತ ಕ್ಷೇತ್ರದಲ್ಲಿ ಕ್ಷಿಪ್ರವಾಗಿ ಬೆಳೆದಿದ್ದು ನಿಜ. ಆದರೆ ಅದೇ ಗತಿಯಲ್ಲಿ ಈ ಲೋಕದಿಂದ ಅವರು ನಿರ್ಗಮಿಸಿದ್ದು ಅತ್ಯಂತ ದುರದೃಷ್ಟಕರ.

–ಪಿ.ವಿ. ಸುಧೀಂದ್ರ, ಬೆಂಗಳೂರು

### ಯಶೋಗಾಥೆ

'ಯಶೋಗಾಥೆ' (ಡಿ.ಬಿ. ನಾಗರಾಜ) ಯಲ್ಲಿ ಯಶಸ್ವಿ ಕೃಷಿಕರಾದ ಕೀರ್ತಿ ಗುರಪ್ಪ ಶಿವಪ್ಪ ಕೋಠಿ ಇವರನ್ನು ಪರಿಚಯಿಸಿರುವುದು ತುಂಬಾ ಸಂತಸ ವಾಯಿತು. 'ಕೈ ಕೆಸರಾದರೆ ಬಾಯಿ ಮೊಸರು' ಎಂಬ ಗಾದೆಯನ್ನು ಕೋಠಿಯಂತವರನ್ನು ನೋಡಿಯೇ ಮಾಡಿರುವರೇನೋ ಎನಿಸುತ್ತದೆ.

–ಪ್ರಹ್ಲಾದರಾಜು ಬುರ್ಲಿ, ದಾವಣಗೆರೆ, ಮಮತಾ ಮೋಹನ ವೈದ್ಯ, ಧಾರವಾಡ

### ಭೂಮಿಗಿಳಿದು ಹೋದ ಗಾಂಧಿ!

ಡಿ.ಎನ್. ಶ್ರೀನಾಥ್ (ಮೂಲ: ಜ್ಞಾನ್ ಚತುರ್ವೇದಿ) ಅವರ ಅನುವಾದಿತ ಕಥೆ 'ಎಚ್ಚರ! ಇದು ಮಹಾತ್ಮ ಗಾಂಧಿ ರಸ್ತೆ' ಓದಿ ಎಚ್ಚರಗೊಂಡೆ. ನಿಜ ಹೇಳ ಬೇಕೆಂದರೆ ಮೊನ್ನೆ ಅ.2ರಂದು ನಮ್ಮ (ಕಳಂಕಿತ) ಮಂತ್ರಿಗಳು ಪೊರಕೆ ಹಿಡಿದು ಕಸ ಗುಡಿಸಲು ಹೋಗಿದ್ದರು. ಪಿ.ಎಂ. ಹೇಳಿದ ಮೇಲೆ 'ಸ್ವಚ್ಛ ಭಾರತ'ಕ್ಕಾಗಿ ಮಹಾತ್ಮ ಗಾಂಧಿ ಕಂಡ ಕನಸನ್ನು ಮಾತ್ರ ಜನ ನಂಬಿದ್ದಾರೆ. ಉಳಿದಂತೆ ಜನ ಯಾರನ್ನೂ ನಂಬಿಲ್ಲ. ಅವರ ಕನಸು ನನಸಾಗುವುದು ಯಾವಾಗ? ಎಚ್ಚರ! ಭಯೋತ್ಪಾದಕರು ಗಾಂಧಿ ಇರುವ ಸ್ವರ್ಗಕ್ಕೆ ಬಾಂಬ್ ಇಟ್ಟಾರು!

–ರಾಜಶೇಖರ ಹಾದಿಮನಿ, ಧಾರವಾಡ, ಎಲ್.ಸುಮಂತ್ ಮಂಗನಹಳ್ಳಿ

### ವಿವಾಹದಲ್ಲಿ ಸರಳತೆ

ವಿಚಾರ ಲಹರಿಯಲ್ಲಿ ಮೂಚಿಯವರ ಲೇಖನ ನಿಜವಾಗಿ ವಿಚಾರಪೂರ್ಣ. ಮದುವೆಯ ಮೂಲ ಉದ್ದೇಶ ಸಮಾನ ಮನಸ್ಕ ಗಂಡು–ಹೆಣ್ಣಿನ ಸಂಬಂಧ ಬೆಳೆಸುವ ಈ ಆಚರಣೆ ಅದ್ಧೂರಿಯಾಗಬೇಕಾಗಿಲ್ಲ. ಆದರೆ ಹಣವಂತರು ಅದ್ಧೂರಿಯಾಗಿ ಏರ್ಪಡಿಸಿ ಹಣ ಖರ್ಚು ಮಾಡುವುದೂ ಸರಿಯೇ. ಇದರಿಂದ ಅನೇಕರಿಗೆ ಜೀವನೋಪಾಯವೂ ಆಗುತ್ತದೆ. ಮುದ್ರಕರು, ಭಕ್ಷ ಭೋಜ್ಯ ತಯಾರಕರು, ಪೆಂಡಾಲ್, ದೀಪಾಲಂಕಾರ ಮಾಡುವವರು ಹೀಗೇ ಅನೇಕ ಚಿಕ್ಕ–ಪುಟ್ಟ ಸ್ವ ಉದ್ಯೋಗಿಗಳಿಗೆ ಅವಕಾಶ ದೊರೆತಂತಾಗುತ್ತದೆ.

–ಶ್ರೀನಾಥ್ ಕೊನೇಟಿ, ಬೆಂಗಳೂರು